## ಕಳೆದ ಸಂಚಿಕೆಯಲ್ಲಿ




ಮಳೆ ಉಂಟು ಮಾಡಿದ ಪ್ರವಾಹದಲ್ಲಿ ಮಾಧವನ್ ಪಿಳ್ಳೈ ಮತ್ತು ಅರುಂಧತಿ ಪಿಳ್ಳೈ ಕೊಚ್ಚಿಕೊಂಡು ಹೋದ ನೋವನ್ನು ಮನಸ್ಸಿಗೆ ಹಚ್ಚಿಕೊಂಡು ಕೂರಲು ಕ್ರಾಂತಿ ಕಿರಣ್ ರೆಡ್ಡಿಗೆ ಸಮಯವಿರಲಿಲ್ಲ. ಮನೆ ಯಿಂದ ಹೊರಗೆ ಬಂದರೆ ಸಾವು ನೋವಿನ ಭೀಕರ ಚಿತ್ರಗಳು ಕಣ್ತುಂಬುತ್ತಿದ್ದವು. ಹರಿವ ನೀರಿನೊಂದಿಗೆ ಏನೆಲ್ಲ ವಸ್ತುಗಳೂ ಜನರ ಕನಸುಗಳೂ ಕೊಚ್ಚಿಕೊಂಡು ಹೋಗುತ್ತಿದ್ದವು. ಅಂಥ ಭೀಕರ ಸ್ಥಿತಿಯಲ್ಲೂ ಕೆ.ಎಮ್. ನಯ್ಯಾರ್ ಅವರು ಧೃತಿಗೆಟ್ಟಿರಲಿಲ್ಲ. ಸಂತ್ರಸ್ತರಿಗೆ ಸಮಾಧಾನ ಹೇಳುತ್ತ, ಅಸಹಾಯಕರಿಗೆ ತಮ್ಮ ಕೈಲಾದ ನೆರವು ನೀಡುತ್ತ ಪರಿಹಾರ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ಒಂದೆಡೆ, ನೊಂದವರ ಕಣ್ಣೀರು ಒರೆಸುವ ಕಾರ್ಯಗಳು ನಡೆಯುತ್ತಿದ್ದರೆ, ಇನ್ನೊಂದೆಡೆ ಪರಿಹಾರ ಕಾರ್ಯಕ್ರಮಗಳ ನೆಪದಲ್ಲಿ ಲಾಭ ಮಾಡಿಕೊಳ್ಳುವ ಲೆಕ್ಕಾಚಾರದ ಮಾತುಕತೆಗಳು ಕ್ರಾಂತಿಯ ಕಿವಿಗೆ ಬಿದ್ದವು.

ಏನನ್ನಿಸುತ್ತೆ ಸಾಹೇಬ್ರೆ' ಎಂದು ಕುತೂಹಲದಿಂದ ನೋಡುತ್ತಾ ಕೇಳಿದ್ದ ಭಗವಾನ್ ಕುಟ್ಟಿ.

‘ಅವರನ್ನು ನೋಡಿದರೆ ತುಂಬಾ ಪ್ರಜ್ಞಾವಂತರಂತೆ ಕಾಣ್ತಾರೆ. ಖಗೋಳ ಶಾಸ್ತ್ರವನ್ನೂ ಆಳವಾಗಿ ಅಭ್ಯಾಸ ಮಾಡಿರಬಹುದು ಅನ್ನಿಸುತ್ತದೆ. ನನಗೆ ಅತ್ಯಂತ ವಿಸ್ಮಯದ ಸಂಗತಿಯೆಂದರೆ ಮುಂದೆ ನಡೆಯುವ ಘಟನೆಗಳನ್ನು ಕರಾರುವಕ್ಕಾಗಿ ಹೇಗೆ ಹೇಳುತ್ತಾರೆ ಎಂಬುದು' ನನ್ನ ಅಭಿಪ್ರಾಯವನ್ನು ಹೇಳಿದ್ದೆ. ‘ಅಚ್ಯುತನ್ ನಂಬಿಯಾರನಿಗೆ ಕ್ಷುದ್ರ ದೇವತೆಗಳ ಅನುಗ್ರಹ ಇದೆ ಅಂತ ಇಲ್ಲಿನ ಜನ ಬಹುವಾಗಿ ನಂಬಿದ್ದಾರೆ. ಅಮಾವಾಸ್ಯೆ ರಾತ್ರಿಗಳಲ್ಲಿ ಅಂಥ ಕ್ಷುದ್ರ ದೇವತೆಗಳೊಂದಿಗೆ ಸ್ಮಶಾನದಲ್ಲಿ ಮಲಗಿರುವುದಾಗಿ ಕೂಡಾ ಹೇಳಿಕೊಳ್ಳುತ್ತಾನೆ. ಹಾಗಾಗಿಯೇ ಮುಂದೆ ಸಂಭವಿಸುವ ಅವಘಡ ಮತ್ತು ಗಂಡಾಂತರಗಳ ಬಗ್ಗೆ ಹೇಳುತ್ತಾನೆಯೇ ಹೊರತು ಶುಭ ಘಟನೆ ಮತ್ತು ಸಂಗತಿಗಳ ಬಗ್ಗೆ ಅವನ ಬಾಯಿಂದ ಒಂದೇ ಒಂದು ಪದವೂ ಸಹ ಬರುವುದಿಲ್ಲ. ಇಷ್ಟಕ್ಕೂ ಅವನ ಜನ್ಮ ವೃತ್ತಾಂತವನ್ನು ಕೇಳಿದರೆ ಅಚ್ಚರಿಪಡುತ್ತೀರಿ...' ನನ್ನ ಫೋನ್ ರಿಂಗಾಗಿದ್ದರಿಂದ ಭಗವಾನ್ ಕುಟ್ಟಿ ಮಾತು ನಿಲ್ಲಿಸಿ ನನ್ನ ಕಡೆಗೆ ಪ್ರಶ್ನಾರ್ಥಕ ದೃಷ್ಟಿ ಬೀರಿದ್ದ. ಕೈ ಸನ್ನೆಯ ಮೂಲಕವೇ ಪರವಾಗಿಲ್ಲ ಇರಿ ಎಂದು ಫೋನ್ ರಿಸೀವ್ ಮಾಡಿಕೊಂಡು ‘ಹಲೋ' ಎಂದಿದ್ದೆ.

‘ಹಲೋ... ಏನು ನನ್ನ ಫೋನಲ್ಲಿ ರಿಂಗ್ ಮಾಡಿದರೆ ದಿನಪೂರ್ತಿ ನಾಟ್ ರೀಚಬಲ್. ನಿನ್ನ ಲಾಯರ್ ಸಿಕ್ಕಿದ್ರು, ತುಂಬಾ ಜೆಂಟಲ್ ಮ್ಯಾನ್. ನಿನ್ನ ಬದಲು ಅವರನ್ನೇ ಮದುವೆಯಾಗಿದ್ರೆ ಚಂದ ಇರೋದು ಅನ್ನಿಸ್ತು ಕ್ಷಣ. ಆದ್ರೆ ಮನುಷ್ಯರು ಒಟ್ಟಾಗಿ ಬಾಳಲು ಶುರುವಾದಾಗಲೇ ಒಬ್ಬರ ಯೋಗ್ಯತೆ ಇನ್ನೊಬ್ಬರಿಗೆ ಸ್ಪಷ್ಟವಾಗಿ ಗೊತ್ತಾಗೋದು. ಅಗ್ರಿಮೆಂಟ್ ಮತ್ತು ಅಪ್ಲಿಕೇಶನ್ ಎರಡರಲ್ಲೂ ನಾನು ಸಹಿ ಮಾಡಿದ್ದೀನಿ. ನನ್ನ ಪಾಲಿಗೆ ನಲವತ್ತು ಲಕ್ಷದ ಚೆಕ್ ನೀನು ಕೊಟ್ಟಿರೋದನ್ನ ನಿನ್ನ ಲಾಯರ್ ನನಗೆ ಕೊಟ್ಟರು. ಐದು ವರ್ಷಗಳ ಕಾಲ ನಿನ್ನ ಜೊತೆ ಹೆಣಗಾಡಿದ್ದಕ್ಕೆ ಅದೇನು ದೊಡ್ಡದಲ್ಲ ಬಿಡು. ಎನಿವೇಸ್ ಗುಡ್ ಬೈ, ನಾನು ಷೆಡ್ಯೂಲ್ ಪ್ರಕಾರ ಆಸ್ಟ್ರೇಲಿಯಾಕ್ಕೆ ಹೋಗ್ತಾ ಇದೀನಿ. ಏನಾದರೂ ಅವಶ್ಯಕತೆ ಇದ್ದರೆ ನಿನ್ನ ಲಾಯರ್‌ರಿಂದ ಫೋನ್ ಮಾಡ್ಸು. ಬಂದು ಕೋರ್ಟ್‌ನಲ್ಲಿ ನನ್ನ ಹೇಳಿಕೆಯನ್ನು ಕೊಟ್ಟು ಹೋಗ್ತೀನಿ'. ಒಂದೇ ಸಮನೆ ಮಾತನಾಡಿದವಳ ಮಾತುಗಳನ್ನು ಮೂಕನಂತೆ ಕೇಳಿಸಿಕೊಂಡು ಕಡೆಯಲ್ಲಿ ‘ಓಕೆ, ಗುಡ್ ಬೈ' ಎಂದು ಫೋನ್ ಇಟ್ಟಿದ್ದೆ. ಹೃದಯ ಭಾರ ಮತ್ತು ಹಗುರ ಎರಡೂ ಕೊನೆಗಳಲ್ಲಿ ನೇತಾಡಿದಂತೆ ಅನುಭವವಾಗಿ ಮಂಚದ ಮೇಲೆ ಕೂತುಕೊಂಡಿದ್ದೆ.

ಭಗವಾನ್ ಕುಟ್ಟಿ ನನ್ನ ಮುಖದ ಮತ್ತು ಮಾತಿನ ಚಹರೆಗಳ ಮೇಲೆ ಗಮನ ಇಟ್ಟವನಂತೆ ‘ಯಾರು, ನಿಮ್ಮ ಮಿಸೆಸ್ ಅಲ್ವಾ' ಎಂದು ಕೇಳಿದ್ದ. ‘ಹೌದು, ನನ್ನ ಹೆಂಡತಿ ಆಶಾ ಬೆಂಗತಮಲೆ, ಅವಳಿಗೆ ಏನು ಬೇಕೆಂದು ಮದುವೆಯಾದ ಐದು ವರ್ಷಗಳಿಂದಲೂ ಪ್ರಯತ್ನಿಸುತ್ತಿದ್ದೇನೆ. ಒಂದೇ ಒಂದು ಇಂಚು ಕೂಡಾ ನನಗೆ ಅರ್ಥವಾಗಲಿಲ್ಲ. ಅದರಿಂದಾಗಿ ಮ್ಯೂಚುವಲ್ ಡೈವೋರ್ಸ್‌ಗೆ ಇಬ್ಬರೂ ಸಹಿ ಮಾಡಿಬಿಟ್ವಿ. ಬಹುಶಃ ನನ್ನೊಂದಿಗೆ ಅವಳ ಮಾತು ಇದೇ ಕೊನೆಯಾಗಬಹುದೇನೋ...' ಸಂಕ್ಷಿಪ್ತವಾಗಿ ಹೇಳಿದ್ದೆ. ‘ಅದೇ ಸರಿ, ಬಿಗಿ ಹಿಡಿಸುವ ವಾತಾವರಣದಲ್ಲಿ ಯಾವೊತ್ತಿಗೂ ಸಲೀಸಾಗಿ ಉಸಿರಾಡಲು ಸಾಧ್ಯವಾಗುವುದಿಲ್ಲ. ಹಾಗೆ ಇದ್ದರೂ ಯಾರಿಗೂ ಕಿಂಚಿತ್ತೂ ಲಾಭವಾಗುವುದಿಲ್ಲ. ಈ ಧರೆಯ ಮೇಲೆ ಭಗವಂತ ಅಸಂಖ್ಯಾತ ಗಂಡುಗಳನ್ನು ಸೃಷ್ಟಿಸಿದಂತೆ ಅಸಂಖ್ಯಾತ ಹೆಣ್ಣುಗಳನ್ನೂ ಸೃಷ್ಟಿಸಿದ್ದಾನೆ. ಅಗತ್ಯಬಿದ್ದಾಗ ಎಂಥ ಕುರೂಪಿ ದೇಹಗಳಾದರೂ ಹೊಂದಿಕೊಳ್ಳುತ್ತವೆ. ಅಗತ್ಯವಿಲ್ಲದಿದ್ದಾಗ ಎಂಥ ಸುಂದರ ದೇಹಗಳಾದರೂ ಹೊಂದಿಕೊಳ್ಳುವುದಿಲ್ಲ'. ಆತ ಜ್ಞಾನಿಯಂತೆ ಮಾತನಾಡಿದ್ದ. ‘ಇರಲಿ ಬಿಡಿ, ಅಚ್ಯುತನ್ ನಂಬಿಯಾರ್ ಬಗ್ಗೆ ಹೇಳುತ್ತಿದ್ದಿರಿ'. ನಾನು ಭಗವಾನ್ ಕುಟ್ಟಿಯ ಮನಸ್ಸನ್ನು ನಂಬಿಯಾರ್ ವಿಷಯದ ಕಡೆಗೆ ತಳ್ಳಿದ್ದೆ. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ವೈಯಕ್ತಿಕ ಸಂಗತಿಗಳಿಗಿಂತಲೂ ಬೇರೆಯವರ ವಿಷಯಗಳಲ್ಲೆ ಆಸಕ್ತಿ, ಕುತೂಹಲಗಳು ಜಾಸ್ತಿಯಿರುವುದು ಕೂಡಾ ಒಂದು ವಿಚಿತ್ರ ಸಂಗತಿಯೇ. ‘ಹಾಂ, ಹೇಳ್ತೇನೆ ಕೇಳಿ. ಈ ಅಚ್ಯುತನ್ ನಂಬಿಯಾರ್ ಅಪ್ಪ ಲೂಯಿಸ್ ಕ್ಯಾಲಿಕಟ್ ಪೋರ್ಟ್‌ನಲ್ಲಿ ಪೋರ್ಟರ್ ಆಗಿದ್ದನಂತೆ. ಬಹಳ ಸ್ಫುರದ್ರೂಪಿಯಾಗಿದ್ದನಂತೆ. ತಾಯಿ ಪ್ರಿಯಾ ನಂಬಿಯಾರ್ ಕ್ಯಾಲಿಕಟ್ ಪ್ರೈವೇಟ್ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಮಲೆಯಾಳಂ ಲೆಕ್ಚರರ್ ಆಗಿದ್ದರಂತೆ. ಆಕೆ ಕೂಡಾ ತುಂಬಾ ಸುಂದರಿಯಾಗಿದ್ದಳಂತೆ. ಯಾವುದೋ ಒಂದು ವಿಚಿತ್ರ ಗಳಿಗೆಯಲ್ಲಿ ಸಂಧಿಸಿದಾಗ ಲೂಯಿಸ್‌ನನ್ನು ಮೆಚ್ಚಿಕೊಂಡಳಂತೆ. ಆಕೆ ಕವಯಿತ್ರಿಯೆಂದು ಸಹ ಹೆಸರು ಗಳಿಸಿದ್ದಳಂತೆ. ಅತ ಮಿಡ್ಲ್ ಸ್ಕೂಲು ಓದಿದ್ದರೆ, ಆಕೆ ಸ್ನಾತಕೋತ್ತರ ಪದವೀಧರೆ. ಈ ಪ್ರೀತಿ, ಪ್ರೇಮಗಳ ಅನನ್ಯತೆಯ ಬೇರುಗಳು ಹುದುಗಿ ವಿಶಾಲವಾಗಿ, ಹುಲುಸಾಗಿ ಹರಡಿಕೊಂಡಿರುವುದು ಕಾಮದ ನೆಲೆಯಲ್ಲಿ ಎಂಬುದು ಮೇಲ್ನೋಟಕ್ಕೆ ಗೋಚರಿಸುವುದಿಲ್ಲ. ಅಕೆ ಅವನನ್ನು ಮದುವೆಯಾಗಲು ನಿರ್ಧರಿಸಿದಾಗ ಪ್ರಿಯಾ ನಂಬಿಯಾರ್ ಕುಟುಂಬದ ಕಡೆಯಿಂದ ವಿಪರೀತ ಪ್ರತಿರೋಧ ವ್ಯಕ್ತವಾಗಿತ್ತಂತೆ. ಆಕೆ ಎಲ್ಲವನ್ನೂ, ಎಲ್ಲರನ್ನೂ ಎದುರಿಸಿ ಚರ್ಚೊಂದರಲ್ಲಿ ಮದುವೆಯನ್ನೂ ಮಾಡಿಕೊಂಡಳಂತೆ. ಮದುವೆಯಾದ ದಿನವೇ ಕಾಲೇಜು ಆಡಳಿತ ಮಂಡಳಿ ಆಕೆಯನ್ನು ಲೆಕ್ಚರರ್ ಕೆಲಸದಿಂದ ಅಮಾನತ್ತು ಮಾಡಿತಂತೆ. ಆದರೆ ಆಕೆ ಎದೆಗುಂದಲಿಲ್ಲವಂತೆ. ಲೂಯಿಸನ ಭುಜಗಳಲ್ಲಿ ಬಲವಿತ್ತು. ಆಕೆಯ ತಲೆಯಲ್ಲಿ ಅಕ್ಷರಗಳಿದ್ದವು. ಆಕೆ ಐಎಎಸ್ ಪರೀಕ್ಷೆಯನ್ನೂ ಕಟ್ಟಿದ್ದಳಂತೆ. ಹಾಗಾಗಿ ಲೂಯಿಸನ ಮನೆಯಲ್ಲಿ ಫಸ್ಟ್ ನೈಟ್‌ಗೆ ಸಂಭ್ರಮದಿಂದಲೇ ಏರ್ಪಾಡು ಮಾಡಲಾಗಿತ್ತಂತೆ. ರಾತ್ರಿಯ ಊಟೋಪಚಾರ ಮುಗಿದು ಅವರು ಫಸ್ಟ್ ನೈಟ್ ಏರ್ಪಡಿಸಿದ್ದ ಕೊಠಡಿಗೆ ಜಸ್ಟ್ ಪ್ರವೇಶ ಮಾಡಿದ್ದರಂತೆ. ಅದೇ ಟೈಮಿಗೆ ಕಸ್ಟಮ್ಸ್ ಇಲಾಖೆಯವರು ಕ್ರೈಂ ಬ್ರಾಂಚ್ ಪೊಲೀಸರೊಂದಿಗೆ ದಾಳಿ ಮಾಡಿದ್ದರಂತೆ. ಪ್ರಸ್ಥದ ಕೋಣೆಯಲ್ಲಿ ಸುಮಾರು ಮೂರು ಕೋಟಿ ಮೌಲ್ಯದ ಡ್ರಗ್ಸ್, ಫಾರಿನ್ ಕರೆನ್ಸಿ, ಡೈಮಂಡ್ಸ್ ಸಿಕ್ಕಿದ್ದವಂತೆ. ಅದನ್ನೇ ಹೇಳ್ತಾ ಹೋದ್ರೆ ಅದೇ ದೊಡ್ಡ ಪುರಾಣ ಆಗುತ್ತೆ. ಶಾರ್ಟಾಗಿ ಹೇಳಿಬಿಡ್ತೀನಿ. ಅವರ ಮಗನೇ ಈ ಅಚ್ಯುತನ್ ನಂಬಿಯಾರ್.'

‘ಅಪ್ಪ ಹತ್ತು ವರ್ಷಗಳ ಹಿಂದೆ ಕ್ಯಾಲಿಕಟ್‌ನಲ್ಲಿ ಸತ್ತು ಹೋದರೆ, ಅಮ್ಮ ಎರಡು ವರ್ಷಗಳ ಹಿಂದೆ ಕನ್ಯಾಕುಮಾರಿಯಲ್ಲಿ ಸತ್ತು ಹೋದಳು. ಇವ ಮೆಕಾನಿಕಲ್ ಇಂಜಿನಿಯರಿಂಗ್ ಮಾಡಿದ. ಕ್ಯಾಲಿಕಟ್‌ನ ನಂಬರ್ ಒನ್ ಡ್ರಗ್ ಪೆಡ್ಲರ್ ಮತ್ತು ಹೆಣ್ಣುಬಾಕ. ಕಸ್ಟಮ್ಸ್ ಮತ್ತು ಪೊಲೀಸ್ ಅಧಿಕಾರಿಗಳ ವೀಕ್‌ನೆಸ್ ಮತ್ತು ರಹಸ್ಯಗಳನ್ನು ಬಲ್ಲ. ಎಲ್ಲರೂ ಅಚ್ಯುತನ್ ನಂಬಿಯಾರ್‌ಗೆ ಸಿಕ್ಕಾಪಟ್ಟೆ ಹೆದರಿಕೊಳ್ತಾರೆ. ಯಾವುದೋ ಘನತರವಾದ ಶಕ್ತಿಯನ್ನು ವಶಪಡಿಸಿಕೊಂಡಿದ್ದಾನೆಂದು ಎಲ್ಲರೂ ಬಲವಾಗಿ ನಂಬಿದ್ದಾರೆ...' ಅಷ್ಟರಲ್ಲಿ ಕೆ.ಎಮ್. ನಯ್ಯಾರಿಂದ ಭಗವಾನ್ ಕುಟ್ಟಿಗೆ ಕರೆ ಬಂದಿದ್ದರಿಂದ ಗುಡ್ ನೈಟ್ ಹೇಳಿ ಹೋಗಿದ್ದ. ನಾನು ಲೈಟ್ ಆಫ್ ಮಾಡಿ ಮಲಗಿದ್ದೆ. ಮನಸ್ಸಿನ ಆಳದಲ್ಲೆಲ್ಲೋ ರಭಸದಿಂದ ಬುಳ ಬುಳ ಹರಿಯುವ ನೀರಿನ ಸಪ್ಪಳ.

### ಭಾಗ–11

ಏಳೂವರೆ ಗಂಟೆಗೆ ಎಚ್ಚರವಾದಾಗ ಹೊರಗೆ